## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ ಬಾಬು (ನಾಮ ನಿರ್ದೇಶನ) ಇವರು ನಿಯಮ 72ರಡಿ ಮಂಡಿಸಿರುವ ಸೂಚನೆಗೆ ಉತ್ತರ**

## ವಿಷಯ

ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಚಿಕ್ಕನಾಯಕನಹಳ್ಳಿ ಪುರಸಭೆಯ ಒಳಚರಂಡಿ ಯೋಜನೆಗೆ 55 ಕೋಟಿ ರೂಪಾಯಿಗಳ ಆಡಳಿತಾತ್ಮಕ ಅನುಮೋದನೆಯನ್ನು 18-10-2019 ರಲ್ಲಿ ನೀಡಲಾಗಿರುತ್ತದೆ. ಈ ಯೋಜನೆಗೆ ಅನುಗುಣವಾಗಿ 26-09-2022 ರಲ್ಲಿ ಪುರಸಭೆಯು ಎಸ್‌ಟಿಪಿ ಜಾಗವನ್ನು ಹಸ್ತಾಂತರ ಮಾಡಿರುತ್ತದೆ. ಸದರಿ ಯೋಜನೆಗೆ ಮೂರು ಬಾರಿ ಟೆಂಡರ್ ಕರೆದು ಅಂತಿಮವಾಗಿ 13-07-2022 ರಲ್ಲಿ ಒಳಚರಂಡಿ ಯೋಜನೆ ಪ್ರಾರಂಭಿಸಲಾಗಿದೆ. ಈ ಯೋಜನೆಯಲ್ಲಿ ಸುಮಾರು 61 ಕಿ.ಮೀ ಒಳಚರಂಡಿ ಮಾರ್ಗ, 2369 ಯಂತ್ರಗುಂಡಿ, 6100 ಗೃಹಸಂಪರ್ಕ, 4 ತ್ಯಾಜ್ಯ ನೀರು ಶುದ್ಧೀಕರಣ ಘಟಕ, 3 ವೆಟ್ ವೆಲ್ ಘಟಕ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದರೆ ಗುತ್ತಿಗೆದಾರರು ಕಾಮಗಾರಿಗಳನ್ನು ಅಪೂರ್ಣಗೊಳಿಸಿದ್ದು, ಕಳಪೆ ಕಾಮಗಾರಿಗಳ ಮೂಲಕ ಇಡೀ ಪಟ್ಟಣದ ಒಳಚರಂಡಿ ಯೋಜನೆಯನ್ನು ಅಸ್ತವ್ಯಸ್ತಗೊಳಿಸಿದ್ದಾರೆ. ಪುರಸಭೆ ಅವಶ್ಯಕವಿರುವ ಜಾಗವನ್ನು ನೀಡಿಲ್ಲವೆಂಬ ಕಾರಣ ನೀಡಿ ನೀರು ಶುದ್ಧೀಕರಣ ಘಟಕ ಮತ್ತು ವೆಟ್‌ವೆಲ್ ಘಟಕಗಳನ್ನು ನಿರ್ಮಿಸಿರುವುದಿಲ್ಲ. ಆದರೆ ಕಾಮಗಾರಿ ಮಾಡದೇ ಕಾಮಗಾರಿಗೆ ಬಹುತೇಕ ಹಣವನ್ನು ಪಡೆಯಲಾಗಿರುತ್ತದೆ. ಕಾನೂನುಬಾಹಿರವಾಗಿ ಕಾಮಗಾರಿ ಹಣವನ್ನು ಪಡೆದು ಕಾಮಗಾರಿಯನ್ನು ಅಪೂರ್ಣಗೊಳಿಸಿರುವ ಇವರೊಂದಿಗೆ ಸ್ಥಳೀಯ ಸಂಸ್ಥೆಯ ಅಧಿಕಾರಿಗಳು ಶಾಮೀಲಾಗಿರುವ ಆರೋಪವಿರುತ್ತದೆ. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಂಡು, ಕ್ರಿಮಿನಲ್ ಪ್ರಕರಣ ದಾಖಲಿಸಿ, ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ, ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

## ಉತ್ತರ

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ.ನಅಇ/16/ಯುಡಿಎಸ್/2019 ದಿನಾಂಕ: 18-10-2019ರಲ್ಲಿ ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.5542.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಗೆ ದಿನಾಂಕ: 04-01-2021 ರಲ್ಲಿ ಮಂಡಳಿಯ ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಯೋಜನೆಯ ಕಾಮಗಾರಿಗಳನ್ನು ಮೆ|| ಕೆ ಗೌಡ & ಕಂಪನಿ ಜಂಟಿ ಉದ್ಯಮ ಮೆ|| ಶ್ರೀ ಶುಭ ಸೇಲ್ಸ್ ಇಂಜಿನಿಯರ್ ಅಂಡ್ ಕಾಂಟ್ರಾಕ್ಟರ್ಸ್, ಬೆಂಗಳೂರು ಇವರಿಗೆ ಕರಾರು ಸಂಖ್ಯೆ.07/2022-23, ದಿನಾಂಕ: 13-07-2022 ರಲ್ಲಿ ರೂ.4182.00 ಲಕ್ಷಗಳಿಗೆ ವಹಿಸಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು 24 ತಿಂಗಳುಗಳ ಕಾಲಾವಧಿಯನ್ನು ನಿಗಧಿಪಡಿಸಲಾಗಿದ್ದು, ಪ್ರಸ್ತುತ ಕಾಮಗಾರಿಯಲ್ಲಿ 70% ಭೌತಿಕ ಪ್ರಗತಿ ಹಾಗೂ 45% ಆರ್ಥಿಕ ಪ್ರಗತಿ ಸಾಧಿಸಿದ್ದು ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ.

ಸದರಿ ಯೋಜನೆಯಡಿ ಚಿಕ್ಕನಾಯಕನಹಳ್ಳಿ ಪಟ್ಟಣವನ್ನು ವಿನ್ಯಾಸಕ್ಕನುಗುಣವಾಗಿ 6 ವಲಯಗಳಾಗಿ ವಿಂಗಡಿಸಲಾಗಿದ್ದು, ಯೋಜನೆಯಡಿ 4 ಸಂಖ್ಯೆ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ಮತ್ತು 3 ಸಂಖ್ಯೆ ವೆಟ್‌ವೆಲ್ ಘಟಕಗಳನ್ನು ನಿರ್ಮಿಸಲು ಅನುವು ಮಾಡಲಾಗಿದೆ.

ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು ಮತ್ತು ವೆಟ್‌ವೆಲ್ ಘಟಕಗಳನ್ನು ನಿರ್ಮಿಸಲು ಅವಶ್ಯವಿರುವ ಜಮೀನುಗಳನ್ನು ಸ್ಥಳೀಯ ಸಂಸ್ಥೆಯ ವತಿಯಿಂದ ಮಂಡಳಿಗೆ ಹಸ್ತಾಂತರಿಸುವಲ್ಲಿ ವಿಳಂಭವಾಗಿರುವುದರಿಂದ, ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ.

**<u>ಯೋಜನೆಯ ವಿವಿಧ ಕಾಮಗಾರಿಗಳ ಪ್ರಗತಿಯ ವಿವರಗಳು ಈ ಕೆಳಗಿನಂತಿವೆ.</u>**

| ಕ್ರಮ ಸಂಖ್ಯೆ | ಕಾಮಗಾರಿ ಇದುವರೆಗಿನ ಪ್ರಗತಿಯ ವಿವರ |
|---|---|
| 1 | **ಆಂತರಿಕ ಕೊಳವೆ ಮಾರ್ಗ:**<br>61.47 ಕಿ.ಮೀ. ಒಳಚರಂಡಿ ಜಾಲದ ಪೈಕಿ 45.00 ಕಿಮೀ ಉದ್ದದ ಜಾಲವು ಪೂರ್ಣಗೊಂಡಿರುತ್ತದೆ. |
| 2 | **ಮೆಷಿನ್‌ಹೋಲ್ ನಿರ್ಮಾಣ:**<br>2396 ಸಂಖ್ಯೆ ಮೆಷಿನ್‌ಹೋಲ್‌ಗಳ ಪೈಕಿ 1450 ಸಂಖ್ಯೆ ನಿರ್ಮಿಸಲಾಗಿದೆ. |
| 3 | **ಗೃಹ ಸಂಪರ್ಕಗಳು:**<br>6100 ಸಂಖ್ಯೆ ಗೃಹ ಸಂಪರ್ಕಗಳ ಪೈಕಿ 4800 ಸಂಖ್ಯೆ ಸಂಪರ್ಕಗಳನ್ನು ಒದಗಿಸಲಾಗಿದೆ. |
| 4 | **ವಲಯ-4 ಅಗಸರಹೊಳೆಯಲ್ಲಿ 2.6 ಎಂ.ಎಲ್.ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ:**<br>ಚಿಕ್ಕನಾಯಕನಹಳ್ಳಿ ತಾಲ್ಲೂಕು, ಚಿಕ್ಕನಾಯಕನಹಳ್ಳಿ ಗ್ರಾಮದ ಸರ್ವೆ ನಂ.7/1 ರಲ್ಲಿ 0 ಎಕರೆ 15 ಗುಂಟೆ ಸರ್ವೆ ನಂ.7/2 ರಲ್ಲಿ 0 ಎಕರೆ 27 ಗುಂಟೆ, ಸರ್ವೆ ನಂ.8/4 ರಲ್ಲಿ 0 ಎಕರೆ 16 ಗುಂಟೆ, ಸರ್ವೆ ನಂ.83/2 ರಲ್ಲಿ 0 ಎಕರೆ 6 ಗುಂಟೆ ಜಮೀನಿನಲ್ಲಿ 2.60 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಹಾಗೂ 8.00 ಮೀ ವ್ಯಾಸದ ವೆಟ್‌ವೆಲ್ ಘಟಕ ನಿರ್ಮಿಸಲು consent award ಆಧಾರದಲ್ಲಿ ಖಾಸಗಿ ಭೂಸ್ವಾಧೀನ ಪಾವತಿಸಿಕೊಂಡು ಪುರಸಭೆಯಿಂದ ಮಂಡಳಿಗೆ ದಿನಾಂಕ: 02-01-2024 ರಲ್ಲಿ ಹಸ್ತಾಂತರಿಸಲಾಗಿದೆ.<br><br>ಸದರಿ ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಚಿಕ್ಕನಾಯಕನಹಳ್ಳಿ ಗ್ರಾಮದ ಸರ್ವೆ ನಂ.5/5F ರಲ್ಲಿ 0 ಎಕರೆ 10 ಗುಂಟೆ ಜಮೀನನ್ನು consent award ಆಧಾರದಲ್ಲಿ ಖಾಸಗಿ ಭೂಸ್ವಾಧೀನ ಪಾವತಿಸಿಕೊಂಡು ಪುರಸಭೆಯಿಂದ ಮಂಡಳಿಗೆ ದಿನಾಂಕ: 25-06-2024 ರಲ್ಲಿ ಹಸ್ತಾಂತರಿಸಲಾಗಿದೆ. |

| ಕ್ರಮ ಸಂಖ್ಯೆ | ಕಾಮಗಾರಿ ಇದುವರೆಗಿನ ಪ್ರಗತಿಯ ವಿವರ |
|---|---|
| | ಸದರಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಪ್ರಗತಿಯಲ್ಲಿದ್ದು, ಶೇ 42% ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು ವಿವರಗಳು ಕೆಳಗಿನಂತಿವೆ.<br>1. SBR basin: walk way in progress.<br>2. PTU unit: columns up to slab completed. Balance work in progress<br>3. Admin Building, Laboratory & Blower room: Plinth beam completed, column work in progress.<br>4. DG Room: Plinth beam completed, Balance work in progress.<br>5. Chlorine contact tank: Civil work completed.<br>6. Chlorination building: Raft work completed. |
| 5 | **ವಲಯ 4 ರಲ್ಲಿ ಅಗಸರಹೊಳೆ ಬಳಿ: 8.00 ಮೀ ವ್ಯಾಸದ ವೆಟ್‌ವೆಲ್ ಘಟಕ:**<br>ಕ್ರಮ ಸಂಖ್ಯೆ: 4 ರಲ್ಲಿ ವಿವರಿಸಿರುವಂತೆ ದಿ: 25-06-2024 ರಲ್ಲಿ ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಮಂಡಳಿಗೆ ಹಸ್ತಾಂತರಿಸಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು ವಿವರಗಳು ಕೆಳಗಿನಂತಿವೆ.<br>1. PTU unit: Civil work completed.<br>2. Wetwell: Floor Slab concreting completed. |
| 6 | **ವಲಯ-5 ರಲ್ಲಿ ಕುರುಬರಹಳ್ಳಿ ರಸ್ತೆಯ ಹತ್ತಿರ: 8.00 ಮೀ ವ್ಯಾಸದ ವೆಟ್‌ವೆಲ್ ಘಟಕ:**<br>ಸರ್ವೆ ನಂ.2/23 ರಲ್ಲಿ 120 x 120 ಅಡಿ ಅಳತೆಯ ಪುರಸಭೆಯ ಜಾಗವನ್ನು ದಿನಾಂಕ: 26-09-2022 ರಂದು ಮಂಡಳಿಗೆ ಹಸ್ತಾಂತರಿಸಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು ವಿವರಗಳು ಕೆಳಗಿನಂತಿವೆ.<br>1. PTU unit: Raft work completed. Vertical wall concrete in progress.<br>2. Wetwell: 2nd lift Vertical wall completed. Balance work in progress. |
| 7 | **ವಲಯ-6 ರಲ್ಲಿ ಜೋಗಿಹಳ್ಳಿ ಹತ್ತಿರ : 6.00 ಮೀ ವ್ಯಾಸದ ವೆಟ್‌ವೆಲ್ ಘಟಕ:**<br>6.00 ಮೀ ಅಳತೆಯ ವೆಟ್‌ವೆಲ್ ಘಟಕವನ್ನು ನಿರ್ಮಿಸಲು ಅವಶ್ಯವಿರುವ ಜಾಗವನ್ನು ದಿನಾಂಕ: 02-09-2025 ರಂದು ಮಂಡಳಿಗೆ ಹಸ್ತಾಂತರಿಸಿದ್ದು, ಸದರಿ ಘಟಕದ ವಿನ್ಯಾಸ ಮತ್ತು ನಕ್ಷೆಗಳು ಅನುಮೋದನೆ ಹಂತದಲ್ಲಿರುತ್ತವೆ. |
| 8 | **ವಲಯ-2 ರ ಕುರುಬರಹಳ್ಳಿ ಹತ್ತಿರ 110 ಕೆ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ:**<br>ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಕುರುಬರಹಳ್ಳಿ ಗ್ರಾಮದ ಸರ್ವೆ ನಂ.35/1ಎ ರಲ್ಲಿ 0 ಎಕರೆ 2 ಗುಂಟೆ ಸರ್ವೆ ನಂ.35/8 ರಲ್ಲಿ 0 ಎಕರೆ 1 ಗುಂಟೆ, ಸರ್ವೆ ನಂ.35/9 ರಲ್ಲಿ 0 ಎಕರೆ 1 ಗುಂಟೆ, ಒಟ್ಟು 0 ಎಕರೆ 4 ಗುಂಟೆ ಜಮೀನಿನಲ್ಲಿ 110 ಕೆ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಿಸಲು ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. |

| | |
|---|---|
| 9 | **ವಲಯ-3 ರ ಕೇದಿಗೆಹಳ್ಳಿ ಹತ್ತಿರ 715 ಕೆ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ:**<br>ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಕೇದಿಗೆಹಳ್ಳಿ ಗ್ರಾಮದ ಸರ್ವೆ ನಂ.22 ರ 0 ಎಕರೆ 15 ಗುಂಟೆ ಜಮೀನಿನಲ್ಲಿ 715 ಕೆ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಿಸಲು ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. |
| 10 | **ವಲಯ-1 ರ ಮಾರುತಿ ನಗರದಲ್ಲಿ 100 ಕೆ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ:**<br>ದಿನಾಂಕ: 12-10-2023 ರಲ್ಲಿ ಹಸ್ತಾಂತರಿಸಿರುವ ಜಮೀನಿನಲ್ಲಿ ಕಾಮಗಾರಿ ಪ್ರಾರಂಭಿಸಲು ನಾಗರೀಕರು ಆಕ್ಷೇಪಿಸಿದ್ದರಿಂದ, ಸದರಿ ಸ್ಥಳದಲ್ಲಿ STP ಬದಲು Machine-Hole Pumping Station ನಿರ್ಮಿಸಲು ತೀರ್ಮಾನಿಸಲಾಗಿದೆ. |
| 11 | **<u>ರಸ್ತೆ ಅಗೆದು ಪುನಃ ಯಥಾಸ್ಥಿತಿಗೆ Restore ಮಾಡಿರುವ ರಸ್ತೆಯ ವಿವರಗಳು</u>** |

| **ರಸ್ತೆಯ ಮಾದರಿ** | **ಕತ್ತರಿಸಿದ ಒಟ್ಟು ಉದ್ದ** | **Restoration ಮಾಡಿರುವ ರಸ್ತೆಯ ಉದ್ದ** | **Restoration ಮಾಡಬೇಕಾಗಿರುವ ರಸ್ತೆಯ ಉದ್ದ** | **ಷರಾ** |
|---|---|---|---|---|
| ಸಿಮೆಂಟ್ ಕಾಂಕ್ರೀಟ್ ರಸ್ತೆಗಳು | 11.34 ಕಿಮೀ | 11.08 ಕಿಮೀ | 0.26 ಕಿಮೀ | ಗೃಹ ಸಂಪರ್ಕಗಳನ್ನು ನೀಡಿದ ನಂತರ ಕೈಗೊಳ್ಳಲು ಉದ್ದೇಶಿಸಿದೆ. |
| **ಡಾಂಬರ್ ರಸ್ತೆಗಳು**<br>• ವೆಟ್ ಮಿಕ್ಸ್ ಮೆಕಡಮ್<br>• ಡಾಂಬರ್ ಮೇಲ್ಪದರ | 14.80 ಕಿಮೀ<br>14.80 ಕಿಮೀ | 13.20 ಕಿಮೀ<br>0.00 ಕಿಮೀ | 1.60 ಕಿಮೀ<br>14.80 ಕಿಮೀ | 13.20 ಕಿಮೀ ಉದ್ದಕ್ಕೆ ವೆಟ್ ಮಿಕ್ಸ್ ಮೆಕಡಮ್ ಅಳವಡಿಸಲಾಗಿದ್ದು, ಡಾಂಬರ್ ಮೇಲ್ಪದರ ಅಳವಡಿಸಬೇಕಾಗಿದೆ |
| ಸ್ಲಾಬ್ ರಸ್ತೆಗಳು | 1.62 ಕಿಮೀ | 1.41 ಕಿಮೀ | 0.21 ಕಿಮೀ | ಗೃಹ ಸಂಪರ್ಕಗಳನ್ನು ನೀಡಿದ ನಂತರ ಕೈಗೊಳ್ಳಲು ಉದ್ದೇಶಿಸಿದೆ. |

ಮೇಲೆ ತಿಳಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆಯು ವಿಳಂಬವಾಗಿರುವುದರಿಂದ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ. ಪ್ರಸ್ತುತ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಯೋಜನೆಯನ್ನು ಜುಲೈ-2026ಕ್ಕೆ ಪೂರ್ಣಗೊಳಿಸಿ ಚಾಲನೆಗೊಳಿಸಲು ಉದ್ದೇಶ ಹೊಂದಲಾಗಿದೆ. ಕಾಮಗಾರಿಗಳನ್ನು ಅನುಮೋದಿತ ವಿನ್ಯಾಸಕ್ಕನುಗುಣವಾಗಿ ಕೈಗೊಳ್ಳಲಾಗಿದ್ದು, ಕಾಮಗಾರಿಯ ಗುಣಮಟ್ಟವನ್ನು 3ನೇ ವ್ಯಕ್ತಿ ತಪಾಸಣಾ ಏಜನ್ಸಿಯಾದ ಮೆ:ಬ್ಯೂರೋ ವೆರಿಟಾಸ್ ಇಂಡಿಯಾ ಪ್ರೈ.ಲಿ ವತಿಯಿಂದ ಎಲ್ಲಾ ಘಟಕಗಳ ಪ್ರತಿ ಹಂತದ ತಪಾಸಣೆಯನ್ನು ಮಾಡಿಸಿ ವರದಿಯನ್ನು ಪಡೆಯಲಾಗಿದೆ.

ಯೋಜನೆಯಡಿ ಗುತ್ತಿಗೆದಾರರು ಇದುವರೆಗೂ ಕೈಗೊಂಡ ಕಾಮಗಾರಿಗೆ ಮಾತ್ರ ಹಣಪಾವತಿ ಮಾಡಲಾಗಿದ್ದು, ಗುತ್ತಿಗೆ ಮೊತ್ತ **ರೂ.4182.00 ಲಕ್ಷಗಳಾಗಿದ್ದು**, ಈವರೆಗೆ **ರೂ.1573.89 ಲಕ್ಷಗಳನ್ನು** ಪಾವತಿಸಲಾಗಿದೆ.

ನಅಇ 114 ಯುಎಂಎಸ್ 2025

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು